ವಿಶ್ವ ಪರಿಸರ ದಿನಾಚರಣೆಯಂದು ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆವತಿಯಿಂದ ಪ್ರತಿ ವರ್ಷ ಪರಿಸರ ಸಂರಕ್ಷಣೆ ಮತ್ತು ವ್ಯವಸ್ಥಾಪನೆ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ (ಸರ್ಕಾರಿ / ಸರ್ಕಾರೇತರ, ಕಂಪನಿಗಳು, ಟ್ರಸ್ಟ್‌ಗಳು ಹಾಗೂ ಇತರೆ) ತಲಾ ಒಂದು ಲಕ್ಷ ನಗದು ಹಾಗೂ ಪ್ರಶಸ್ತಿ ಪ್ರಮಾಣ ಪತ್ರವನ್ನೊಳಗೊಂಡ **ರಾಜ್ಯ ಪರಿಸರ ಪ್ರಶಸ್ತಿ** ನೀಡಲಾಗುತ್ತಿದೆ.

ಊ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಸರ ಜಾಗೃತಿ ಕಾರ್ಯಕ್ರಮದಡಿಯಲ್ಲಿ 2012–13 ರಲ್ಲಿ ಒಟ್ಟು ₹1,30,40,230/– ಹಾಗೂ 2013–14 ರಲ್ಲಿ ಒಟ್ಟು ₹ 1,64,71,864/– ಗಳನ್ನು ವೆಚ್ಚ ಮಾಡಿರುತ್ತದೆ.

ಪದವಿ ಪೂರ್ವ ಕಾಲೇಜುಗಳಲ್ಲಿ ಇಕೋ ಕ್ಲಬ್‌ಗಳ ಸ್ಥಾಪನೆಗಾಗಿ ರಾಜ್ಯ ಸರ್ಕಾರದವತಿಯಿಂದ 2012–13ನೇ ಸಾಲಿನಲ್ಲಿ ₹ 12.5 ಲಕ್ಷ, 2013–14ನೇ ಸಾಲಿನಲ್ಲಿ ₹ 25.00ಲಕ್ಷಗಳನ್ನು ಹಾಗೂ 2014–15ನೇ ಸಾಲಿನಲ್ಲಿ ₹ 50.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಅರಣ್ಯದ ಪ್ರಮಾಣ

2044 (2580); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ರಾಜ್ಯದಲ್ಲಿರುವ ಒಟ್ಟು ಅರಣ್ಯ ಪ್ರಮಾಣ ಎಷ್ಟು;

ಆ) ಕಳೆದ ಎರಡು ವರ್ಷದಲ್ಲಿ ಅರಣ್ಯ ಪ್ರದೇಶ ಕಡಿಮೆ ಆಗಿದೆಯೇ ಅಥವಾ ಹೆಚ್ಚಾಗಿದೆಯೋ;

ಇ) ಅರಣ್ಯ ಪ್ರದೇಶದಲ್ಲಿ ಕಾಯ್ದಿಟ್ಟ ಅರಣ್ಯ ಪ್ರದೇಶ ಎಷ್ಟು;

ಈ) ರಾಜ್ಯದ ಯಾವ ಜಿಲ್ಲೆಯಲ್ಲಿ ಅರಣ್ಯ ಪ್ರಮಾಣ ಹೆಚ್ಚಾಗಿದೆ: ಯಾವ ಭಾಗದಲ್ಲಿ ಅತ್ಯಂತ ಕಡಿಮೆ ಇದೆ; (ಜಿಲ್ಲಾವಾರು ಅರಣ್ಯ ಪ್ರದೇಶಗಳ ಹೆಕ್ಟೇರ್ ವಿವರ ನೀಡುವುದು)

ಊ) ರಾಜ್ಯದಲ್ಲಿರುವ ವನ್ಯಜೀವಿ ಉದ್ಯಾನವನ ಎಷ್ಟು; ಇನ್ನಷ್ಟು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ಇದ್ದಲ್ಲಿ ಹಾಗೂ ಇಲ್ಲವಾದಲ್ಲಿ ಕಾರಣ ತಿಳಿಸುವುದು?

ಶ್ರೀ ಬಿ. ರಮಾನಾಥ್ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಶ್ತ್ರ ಸಚಿವರು)

ಅ) ಪುನರ್ ರಚಿತ ತಜ್ಞರ ಸಮಿತಿ–1ರಲ್ಲಿ ನೀಡಿರುವ ವರದಿಯಂತೆ ರಾಜ್ಯದಲ್ಲಿ ಒಟ್ಟು 43356.47 ಚ.ಕಿ.ಮೀ ಅರಣ್ಯ ಪ್ರದೇಶವಿರುತ್ತದೆ.

ಆ) 2013ರ ಫಾರೆಸ್ಟ್ ಸರ್ವೆ ಆಫ್ ಇಂಡಿಯಾ ನೀಡಿರುವ ವರದಿಯ ಪ್ರಕಾರ ಕಳೆದೆರಡು ವರ್ಷಗಳಲ್ಲಿ ರಾಜ್ಯದಲ್ಲಿ ವೃಕ್ಷ ಕವಚ (Forest Cover) ಶೇ. 0.62% ಕಡಿಮೆಯಾಗಿರುತ್ತದೆ. ಏಕೆಂದರೆ ಕೋಲಾರ ಜಿಲ್ಲೆಯಲ್ಲಿ ನಿರಂತರವಾಗಿ ನೀಲಗಿರಿ ನೆಡುತೋಪನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ವತಿಯಿಂದ ಕಡಿತಲೆ ಮಾಡಿದ ಕಾರಣ ವೃಕ್ಷ ಕವಚದ ಸಾಂದ್ರತೆ ಕಡಿಮೆಯಾಗಿರುತ್ತದೆ.

ಇ) ರಾಜ್ಯದಲ್ಲಿರುವ ಕಾಯ್ದಿಟ್ಟ ಅರಣ್ಯ ಪ್ರದೇಶಗಳ ಒಟ್ಟು ವಿಸ್ತೀರ್ಣ 33,23,854.98 ಹೇಕ್ಟೇರ್ ಇರುತ್ತದೆ.

ಈ) ರಾಜ್ಯದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಅರಣ್ಯ ಪ್ರದೇಶವಿರುತ್ತದೆ. ಬಿಜಾಪುರ ಜಿಲ್ಲೆಯಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಅರಣ್ಯ ಪ್ರದೇಶವಿರುತ್ತದೆ. ಈ ಬಗ್ಗೆ ಪುನರ್ ರಚಿತ ತಜ್ಞರ ಸಮಿತಿ–1 ನೀಡಿರುವ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಉ) ರಾಜ್ಯದಲ್ಲಿ 5 ರಾಷ್ಟ್ರೀಯ ಉದ್ಯಾನವನ ಮತ್ತು 27 ವನ್ಯಧಾಮಗಳು ಇರುತ್ತವೆ. ಜೀವವೈವಿದ್ಯತೆ ಮತ್ತು ವನ್ಯಜೀವಿ ಸಂಪದ್ಭರಿತ ಪ್ರದೇಶಗಳನ್ನೊಳಗೊಂಡ ಪ್ರಸ್ತಾವನೆಗಳನ್ನು ಸರ್ಕಾರದ/ರಾಜ್ಯ ವನ್ಯಜೀವಿ ಮಂಡಳಿ/ ರಾಷ್ಟ್ರೀಯ ವನ್ಯಜೀವಿ ಮಂಡಳಿಯಿಂದ ಆಗಿಂದಾಗ್ಗೆ ಪರಾಮರ್ಶಿಸಲಾಗುತ್ತಿರುತ್ತದೆ. ಮತ್ತು ಈ ವಿಷಯದಲ್ಲಿ ಕಾನೂನಿನ ಅನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ-1

ಕೋಷ್ಟಕ – 2

2013–14ನೇ ಸಾಲಿನಲ್ಲಿ ವಿವಿಧ ವರ್ಗಗಳಲ್ಲಿ ಇರುವ ಅಂಗ್ಲ ಪ್ರದೇಶ

(ಮಾನ್ಯ ರಾಜ್ಯ ಪತ್ರ ಸಂಖ್ಯೆ–1 ರ ಪರಿಷಯ ಮೇರೆಗೆ)

(ಮೊತ್ತ ಸಾವಿರಗಳಲ್ಲಿ)

ಕ್ರ. ಸಂ.	ಜಿಲ್ಲೆ	ಸಾಮಾನ್ಯ ಅಂಗ್ಲ	ಪರಿಶಿಷ್ಟ ಅಂಗ್ಲ	ಪರಿಶಿಷ್ಟ ಪಂಗಡದ ಅಂಗ್ಲ	ಇತರೆ ಹಿಂದುಳಿದ ವರ್ಗಗಳ ಅಂಗ್ಲ	ಮುಸ್ಲಿಂ ಅಂಗ್ಲ	ಒಟ್ಟು
1	ಬೆಂಗಳೂರು-(ನ)	24.92	2.74	94.59	-	-	122.25
2	ಬೆಂಗಳೂರು-(ಗ್ರಾ)	980.51	87.88	96.48	-	-	1164.85
3	ರಾಮನಗರ						
4	ಚಿಕ್ಕಬಳ್ಳಾಪುರ	1890.97	12.03	157.87	2.33	-	2063.20
5	ಕೋಲಾರ	947.80	325.54	105.18	-	-	1378.52
6	ತುಮಕೂರು	54.67	124.91	274.99	-	1.60	456.16
7	ಮಂಡ್ಯ	17.22	0.29	63.60	-	-	81.11
8	ಮೈಸೂರು-(ನ)	790.69	-	48.24	-	-	838.93
9	ಚಾಮರಾಜನಗರ	1312.10	362.36	1063.17	6.86	-	2750.51
10	ಹಾಸನ	765.11	74.66	447.41	-	-	1287.18
11	ದಕ್ಷಿಣ ಕನ್ನಡ	407.33	121.25	65.76	-	-	544.34
12	ಉಡುಪಿ	1311.74	0.16	647.82	-	52.47	2012.18
13	ಶಿವಮೊಗ್ಗ	951.34	16.67	752.30	-	-	1720.57
14	ಉತ್ತರ ಕನ್ನಡ	449.10	3.20	16.24	-	-	468.54
15	ಧಾರವಾಡ	320.93	3.66	8.68	-	-	333.37
16	ಹಾವೇರಿ	346.31	9.86	76.61	-	-	432.80
17	ಗದಗ	273.07	226.09	498.00	-	-	997.76
18	ಬೆಳಗಾವಿ						
19	ಬಾಗಲಕೋಟೆ	413.97	88.45	376.14	0.69	-	879.25
20	ವಿಜಾಪುರ	1366.94	105.46	1398.60	-	-	2870.99
21	ಬೀದರ್	832.79	87.63	142.68	3.12	-	1066.22
22	ಕಲಬುರಗಿ						
23	ರಾಯಚೂರು	180.91	22.97	443.83	-	-	644.61
24	ಬಳ್ಳಾರಿ	1206.76	23.31	217.81	-	-	1449.87
25	ಕೊಪ್ಪಳ	2630.47	71.10	21.89	-	-	2791.46
26	ಯಾದಗಿರಿ	166.30	41.76	97.52	-	-	325.57
27	ಗುಲ್ಬರ್ಗ	151.71	55.54	223.41	-	-	430.66
28	ಬಿದರ್	3210.71	1109.69	2295.60	7.44	-	6631.44
29	ಕೊಡಗು	780.00	130.34	380.30	0.43	-	1291.67
30	ಅಕ್ಕಪಕ್ಕದ ರಾಜ್ಯ	7727.710	542.130	0.440	26.180	-	8296.460
	ಒಟ್ಟು	29880.37	3940.07	10024.91	49.05	54.07	43950.47